ದಿನಾಂಕಃ 03.02.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಯ ಪರ ವಕೀಲರಿಂದಃ

ನಾನು 10 ನೇ ತರಗತಿ ಅನುತ್ತೀರ್ಣಗೊಂಡಿರುತ್ತೇನೆ. ನನ್ನ ಪ್ರಾಥಮಿಕ ಶಿಕ್ಷಣ ಖನಗಾಂವಿಯಲ್ಲಿ ಹಾಗೂ ಮಾಧ್ಯಮಿಕ ಪ್ರೌಢ ಶಾಲೆಯನ್ನು ಗೋಕಾಕ್‌ನಲ್ಲಿ ಕಲಿತಿರುತ್ತೇನೆ. ನನ್ನ ಜನ್ಮ ದಿನಾಂಕ ಹೇಳಲಾಗುವುದಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಯಾವುದಾದರೂ ಪೇಪರ್‌ನ್ನು ನನಗೆ ಕೊಟ್ಟರೇ ಅದನ್ನು ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ. ಈ ದಾವೆಯನ್ನು ದಾಖಲು ಮಾಡಲು ನಾನೇ ನನ್ನ ವಕೀಲರಿಗೆ ಮಾಹಿತಿ ಕೊಟ್ಟಿದ್ದೇನೆ. ದಾವೆಯಲ್ಲಿ ಹೊಲಬೇಕೆಂದು ನಾನು ಕೇಳಿಕೊಂಡಿದ್ದೇನೆ. ನನ್ನ ಮಗಳ ಹೆಸರು ಕನ್ಯಾಕುಮಾರಿ ಎಂದರೆ ಸರಿ. ನಾನು ಅವರ ಜೊತೆಯಲ್ಲಿ ಹಿರಿಯೂರಿನಲ್ಲಿ ಒಂದೇ ಮನೆಯಲ್ಲಿ ವಾಸವಿದ್ದೇನೆ ಎಂದರೆ ಸರಿ. ಕನ್ಯಾಕುಮಾರಿ ನನ್ನ ಮತ್ತು ಪ್ರತಿವಾದಿ ವಿಕ್ರಮ್ ರವರ ಮೇಲೆ ಓ.ಎಸ್ ನಂ.415/2020 ನ್ನು ದಾಖಲು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಅದರಲ್ಲಿ ನೀವು ವಕೀಲರಾದ ಶೆರೆಗಾರ್ ರವರ ಮೂಲಕ ಹಾಜರಾಗಿ ಪ್ರತಿವಾದಪತ್ರ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಕನ್ಯಾಕುಮಾರಿಯ ಗಂಡನ ಹೆಸರು ಮಂಜುನಾಥ ಎಂದರೆ ಸರಿ. ಅವರು ಒಕ್ಕಲುತನ ಮಾಡುತ್ತಾರೆ ಎಂದರೆ ಸಾಕ್ಷಿ ಅವರು ಜೇರಾಕ್ಸ್ ಅಂಗಡಿ ಇಟ್ಟಿದ್ದಾರೆ ಎನ್ನುತ್ತಾರೆ. ಅವರು ವ್ಯವಸಾಯ ಮಾಡುವುದಿಲ್ಲ ಎಂದರೆ ಸರಿ. ಜೇರಾಕ್ಸ್ ಅಂಗಡಿಯಿಂದ ಹೆಚ್ಚಿನ ಆದಾಯ ಬರುವುದಿಲ್ಲ ಎಂದರೆ ಸರಿ. ಮಂಜುನಾಥರವರು ನನಗೆ ಈ ದಾವೆ ದಾಖಲು ಮಾಡಲು ಹೇಳಿದ್ದಾರೆ ಎಂದರೆ ಸರಿ.

2. ಈ ದಾವೆಯಲ್ಲಿ ಸರ್ವೆ ನಂ.331/2 ರಲ್ಲಿ 3 ಎಕರೆ 32 ಗುಂಟೆ ಜಮೀನು ಇರುತ್ತದೆ. ಇದರ ಚೆಕ್‌ಬಂದಿ ನನಗೆ ಹೇಳಲು ಬರುವುದಿಲ್ಲ. ಸದರಿ ಸರ್ವೇ ನಂಬರ್‌ನ ದಕ್ಷಿಣ ದಿಕ್ಕಿಗೆ ಪ್ಲಾಟ್ಸ್‌ಗಳು ಇರುತ್ತವೆ ಎಂದರೆ ಸಾಕ್ಷಿ ನಾನು ಅಲ್ಲಿಗೆ ಹೋಗಿಯೇ ಇಲ್ಲ ಎನ್ನುತ್ತಾರೆ. 15 ವರ್ಷಗಳಿಂದ ಹೋಗಿಲ್ಲ. ಸದರಿ ಜಮೀನು ನನ್ನ ತಂದೆ ಶಿವನಾಯಕ್ ರವರದ್ದಾಗಿತ್ತು ಎಂಬ ವಿಚಾರ ನನಗೆ ಗೊತ್ತಿದೆ. ಅವರು ಸಾಲ ಮಾಡಿ ಸದರಿ

ಜಮೀನಿನಲ್ಲಿ ಪ್ಲಾಟ್‌ಗಳನ್ನು ಮಾಡಿ ಎಲ್ಲಾ ಮಾರಿದ್ದಾರೆ ಎಂದರೆ ಸಾಕ್ಷಿ ಅದೇನೂ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಶಿವನಾಯಕ್‌ರವರು ಏನೂ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ನಿಮ್ಮ ಮನೆತನದ ಖರ್ಚಿಗಾಗಿ ಪ್ರತಿವಾದಿಯ ಕಡೆಯಿಂದ ಶಿವನಾಯಕ್‌ರವರ ಮೇಲಿಂದ ಮೇಲೆ ಹಣ ತೆಗದುಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಅದೇನೂ ನನಗೆ ಗೊತಿಲ್ಲ ಎನ್ನುತ್ತಾರೆ. ಸರ್ವೇ ನಂ.81ರ ಚೆಕ್‌ಬಂದಿ ನನಗೆ ಹೇಳಲು ಬರುವುದಿಲ್ಲ. ಈ ಜಮೀನಿನ ಬಳಿ ಹೋಗಿ ನೀವು 15 ವರ್ಷಗಳು ಆಗಿದೆ ಅದನ್ನು ನೋಡಿಲ್ಲ ಎಂದರೆ ಸಾಕ್ಷಿ ನೋಡಿಲ್ಲ ಎನ್ನುತ್ತಾರೆ. ಸರ್ವೇ ನಂ.331ರ ಮಾರುಕಟ್ಟೆಯ ಬೆಲೆ 1 ಎಕರೆಗೆ 10 ರಿಂದ 12 ಲಕ್ಷ ಇರುತ್ತದೆ ಎಂದರೆ ಸಾಕ್ಷಿ 30 ಲಕ್ಷದವರೆಗೆ ಇರುತ್ತದೆ ಎನ್ನುತ್ತಾರೆ. ಅಲ್ಲಿಯ ಅಕ್ಕ ಪಕ್ಕ ಪ್ಲಾಟ್‌ಗಳು ಮನೆಗಳು ಆಗಿರುವ ಕಾರಣ ಆ ಆಸ್ತಿಯ ಬೆಲೆ 1 ಕೋಟಿಗಿಂತಲೂ ಹೆಚ್ಚಾಗಿದೆ ಎಂದರೆ ಸರಿ. ನಾನು ದಾವೆ ಸಲ್ಲಿಸುವಾಗ ಈ ರೀತಿ ಬೆಲೆ ಬಾಳುತ್ತೆ ಎಂದು ನನ್ನ ವಕೀಲರಿಗೆ ನಾನು ಹೇಳಿದ್ದೇನೆ.

3. ನನ್ನ ತಂದೆಯ ಹೆಸರು ಶಿವನಾಯಕ್ ಬಾಳಾಸಾಹೇಬ ನಾಯಕ್ ಎಂದರೆ ಸರಿ. ನನ್ನ ತಂದೆಯ ತಂದೆಯವರ ಹೆಸರು ಅಣ್ಣಾಸಾಹೇಬ್ ಎಂದರೆ ಸರಿ. ಅವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೇಯ ಹೆಂಡತಿಯ ಹೆಸರು ತಂಗೆವ್ವ ಎಂದರೆ ಸರಿ. 2 ನೇ ಹೆಂಡತಿಯ ಹೆಸರು ನೀಲಾಬಾಯಿ. ಮೊದಲನೇಯ ಹೆಂಡತಿ ಮೃತಪಟ್ಟ ನಂತರ 2 ನೇ ಹೆಂಡತಿಯನ್ನು ಮದುವೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ನನ್ನ ತಂದೆಯವರು ತಂಗೆವ್ವರವರ ಮಗ ಎಂದರೆ ಸರಿ. ಪ್ರತಿವಾದಿ ವಿಕ್ರಮ್ ರವರು 2 ನೇ ಹೆಂಡತಿ ನೀಲಾಬಾಯಿಯವರ ಮಗ ಎಂದರೆ ಸರಿ. ನನ್ನ ಗಂಡನ ಹೆಸರು ಅಪ್ಪಾಸಾಹೇಬ್ ಎಂದರೆ ಸರಿ. ನನ್ನ ಮದುವೆ 1999ರಲ್ಲಿ ಆಗಿದೆ ಎಂದರೆ ಸರಿ. ಮದುವೆಯ ಎಲ್ಲಾ ಖರ್ಚುಗಳನ್ನು ವಿಕ್ರಮ್ ನಾಯಕ್‌ರವರು ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆಯವರು ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ತಂದೆಗೆ ಯಾವುದೇ ಆದಾಯವಿರಲಿಲ್ಲ, ಅವರು ಸಾಲ ಮಾಡಿಕೊಂಡು ಊರ ತುಂಬಾ ತಿರುಗಾಡುತ್ತಿದ್ದರು ಎಂದರೆ ಸಾಕ್ಷಿ ನನಗೆ ಏನೂ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಮದುವೆಯ ಸಮಯಕ್ಕೆ ನನ್ನ ವಯಸ್ಸು 19 ವರ್ಷ ಇತ್ತು ಎಂದರೆ ಸರಿ, ನನ್ನ ಮದುವೆ 19.04.1999ರಲ್ಲಿ

ಅಪ್ಪಾಸಾಹೇಬರವರ ಜೊತೆಗೆ ಮುನ್ನಿಯಾಳದಲ್ಲಿ ಆಗಿದೆ ಎಂದರೆ ಸರಿ. ನನ್ನ ಗಂಡ ಮತ್ತು ಅವರ ಅಣ್ಣತಮ್ಮಂದಿರಿಗೆ ಎಲ್ಲಾ ಸೇರಿ 4-5 ಎಕರೆ ಜಮೀನು ಇತ್ತು ಎಂದರೆ ಸರಿ. ನನ್ನ ಗಂಡ ಮದ್ಯ ಸೇವನೆ ಮಾಡುತ್ತಿದ್ದರು ಎಂದರೆ ಸರಿ. ಅವರು ಅವರ 29 ನೇ ವಯಸ್ಸಿಗೆ ದಿಃ11.05.2010 ರಲ್ಲಿ ಅತಿಯಾದ ಮದ್ಯಪಾನ ಮಾಡಿ ನಶೆಯಲ್ಲಿ ಬಿದ್ದು ಮೃತಪಟ್ಟಿರುತ್ತಾರೆ ಎಂದರೆ ಸರಿ.

4. ನನ್ನ ಗಂಡ ಏನೂ ಕೆಲಸ ಮಾಡುತ್ತಿರಲಿಲ್ಲ, ಮದ್ಯಪಾನ ಮಾಡಿಕೊಂಡು ಅಡ್ಡಾಡುತ್ತಾ ಇದ್ದರು ಎಂದರೆ ಸರಿ. ಅವರು ಸಾಕಷ್ಟು ಸಾಲ ಮಾಡಿ ಹೋಗಿದ್ದರು ಎಂದರೆ ಸರಿ. ಅವರು ಮೃತಪಟ್ಟ ನಂತರ ಪ್ರತಿವಾದಿ ವಿಕ್ರಮ್‌ರವರು ನಿಮಗೆ ಮತ್ತು ನಿಮ್ಮ ಮಗಳಿಗೆ ಪ್ರತಿ ತಿಂಗಳು 5 ಸಾವಿರ ಹಣ ಕಳಿಸುತ್ತಿದ್ದರು ಎಂದರೆ ಸಾಕ್ಷಿ 3 ವರ್ಷ ಕಳಿಸಿದ್ದಾರೆ ಎನ್ನುತ್ತಾರೆ. ನನ್ನ ಗಂಡ ಮೃತಪಟ್ಟ ನಂತರ ನನಗೆ ಮತ್ತು ನನ್ನ ಮಗಳಿಗೆ ಆರ್ಥಿಕವಾಗಿ ಸಹಾಯ ಮಾಡಲು ಯಾರು ಇರಲಿಲ್ಲ ಎಂದರೆ ಸರಿ. ಬಾಳಾಸಾಹೇಬ ಮತ್ತು ತಾಯವ್ವರವರು ಶಿವನಾಯಕ್‌ರವರಿಗೆ ದತ್ತಕ ತೆಗೆದುಕೊಂಡಿದ್ದರು ಎಂದರೆ ಸರಿ. ಅವರಿಗೆ ಸ್ವಂತ ಮಕ್ಕಳು ಇಲ್ಲದಿದ್ದ ಕಾರಣ ನನ್ನ ತಂದೆಗೆ ಹೇಳಿ ಅವರನ್ನು ದತ್ತಕ ತೆಗೆದುಕೊಂಡಿದ್ದರು ಎಂದರೆ ಸರಿ. 28.05.1946 ರಲ್ಲಿ ನೊಂದು ದತ್ತಕ ಪತ್ರದ ಮೂಲಕ ದತ್ತು ಪಡೆದುಕೊಂಡಿದ್ದಾರೆ ಎಂಬುವುದು ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರು ಗಂಗವ್ವ ಎಂದರೆ ಸರಿ. ದಾವಾ ಆಸ್ತಿ ಸರ್ವೇ ನಂ.331 ಮತ್ತು 81 ರ ಮೂಲ ಮಾಲೀಕರು ಬಾಳಾಸಾಹೇಬ ಮತ್ತು ತಾಯವ್ವ ಎಂದರೆ ಸರಿ. ಅವರು ಮೃತಪಟ್ಟ ನಂತರ ಶಿವನಾಯಕ್‌ರವರು ದಾವಾ ಸ್ವತ್ತುಗಳ ಮಾಲೀಕರಾದರು ಎಂದರೆ ಸರಿ. ಅದು ಅವರ ಸ್ವಂತ ಆಸ್ತಿ ಆಗಿತ್ತು ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ